ಸಚಿವರು ಯೋಚನೆ ಮಾಡಿದ್ದಾರಾ ? ಅದನ್ನು ಸಭೆಯ ಗಮನಕ್ಕೆ ತಮ್ಮ ಮುಖಾಂತರ ತರಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಹದೇವ್ :- ಸಧ್ಯಕ್ಕೆ ಹೊಸ ಆಸ್ಪತ್ರೆಗಳನ್ನು ತೆಗೆಯತಕ್ಕ ವಿಚಾರ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಈಗ ಇರತಕ್ಕ ಆಸ್ಪತ್ರೆಗಳನ್ನೇ ಅಭಿವೃದ್ಧಿ ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಕಾನೂನು ಬಾಹಿರ ನೇಮಕಾತಿ 136(1316)

ಅಧ್ಯಕ್ಷರು :- ಮುಂದಿನ ಪ್ರಶ್ನೆ ಮಾನ್ಯ ಸುರೇಶ್ ಕುಮಾರ್ ಅವರದ್ದು.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 1316 ರನ್ನು ಕೇಳುತ್ತೇನೆ.

ಅಧ್ಯಕ್ಷರು :- ಮಾನ್ಯ ಸಚಿವರು ಸರ್ಕಾರದ ಕೆಲಸಕ್ಕೆ ದೆಹಲಿಗೆ ಹೋಗಿದ್ದಾರೆ. ನಿನ್ನೆ ಬಂದು ಸರ್ಕಾರದ ಕೆಲಸ ಇದೆ, ನಮ್ಮ ಸರ್ಕಾರಕ್ಕೆ ಆದಾಯ ಬರುತ್ತದೆ ಎಂದು ಹೇಳಿ ಲೆಟರ್ ಕೊಟ್ಟು ದೆಹಲಿಗೆ ಮೀಟಿಂಗ್ ಕರೆದಿದ್ದಾರೆ ಹೋಗಿದ್ದಾರೆ. We will take up next week.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ತಾವೇ ನೋಡಿದ ಹಾಗೆ ನನ್ನ ನಾಲ್ಕನೇ ಪ್ರಶ್ನೆ ಹೀಗಾಗುತ್ತಿರುವುದು. ಹಿಂದಿನ ಪ್ರಶ್ನೆ ಕೇಳಿದಾಗ ಮಿನಿಸ್ಟರ್‌ನಿಂದಲೇ ಬದಲಾವಣೆ ಮಾಡಿದಿರಿ. ಇವತ್ತು ಮಿನಿಸ್ಟರ್ ಇಲ್ಲ. ಇವತ್ತು ಅನೇಕ ಪ್ರಶ್ನೆಗಳಿಗೆ ಮಾನ್ಯ ನಮ್ಮ ಚಂದ್ರೇಗೌಡರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಆರ್.ವಿ. ದೇಶಪಾಂಡೆ ಅವರು ಇದ್ದಾರೆ, ಅವರು ಉತ್ತರ ಕೊಡಲಿ.

ಶ್ರೀ ಆರ್.ವಿ. ದೇಶಪಾಂಡೆ :- ಏನು ವಿಷಯ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ :- ಜಿಟಿಡಿಸಿಯದ್ದು, ಅವರು ಉತ್ತರ ಕೊಡಲಿ.

ಶ್ರೀ ಆರ್.ವಿ. ದೇಶಪಾಂಡೆ :- ನಿಮಗೆ ಉತ್ತರ ಕೊಡಬೇಕಲ್ಲಾ. ಜನರಲ್ ಇನ್‌ಫರ್ಮೇಷನ್ ಆದರೆ ನಾನು ಕೊಡಬಹುದು.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಮಂತ್ರಿಗಳು ಹೋಗುವುದಕ್ಕಿಂತ ಮುಂಚೆ ಈ ರೀತಿ ಬೇರೆಯವರಿಗೆ ಕೊಟ್ಟು ದಯವಿಟ್ಟು ಆನ್ಸರ್ ಮಾಡಿ ಎಂದು ಹೇಳಬಹುದಾಗಿತ್ತು ತಾನೇ ?

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆ ಏನು ಅಂದರೆ ಪ್ರಶ್ನೆಗಳು ಬರುವುದೇ ಭಾರೀ ಅಪರೂಪದಲ್ಲಿ ಒಮ್ಮೊಮ್ಮೆ ಬಂದಾಗ ಕೂಡ ಆ ಇಲಾಖೆಯ ಮಂತ್ರಿಗಳು ಇಲ್ಲ ಅಂತ ಆದರೆ ದಯವಿಟ್ಟು ಬೇರೆಯವರಿಗೆ ಉತ್ತರ ಹೇಳಲು ಅವಕಾಶ ಆಗಬಹುದಲ್ಲಾ.

ಅಧ್ಯಕ್ಷರು :- ಆವರೇಜ್ ಹನ್ನೆರಡು ಪ್ರಶ್ನೆ ಬರುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :- ಇವರದ್ದು ನತದೃಷ್ಟ ರಾಶಿ. ಈ ಅಧಿವೇಶನದಲ್ಲಿ ಅತ್ಯಂತ ನತದೃಷ್ಟರು ಎಂದರೆ ಮಾನ್ಯ ಸುರೇಶ್ ಕುಮಾರ್ ಅವರು. ನಾಲ್ಕು ಪ್ರಶ್ನೆ ಬಂದಿದೆ, ನಾಲ್ಕೂ ಕೂಡ ಉತ್ತರ ಬರಲಿಲ್ಲ.

ಅಧ್ಯಕ್ಷರು :- ಅವರ ಅದೃಷ್ಟಕ್ಕೆ ನಾವೇನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ಆರ್.ವಿ. ದೇಶಪಾಂಡೆ :- ಅವರು ವಿಷಯ ಏನು ಇದೆ ಹೇಳಲಿ.

ಶ್ರೀ ಎಸ್. ಸುರೇಶ್ ಕುಮರ್ :- ಸಾರ್ ಅವರು ಈಗ ಉತ್ತರ ಕೊಡುತ್ತಾರಂತೆ ಕೇಳಿ ಬಿಡುತ್ತೇನೆ.

ಶ್ರೀ ಸಿ. ಚನ್ನಿಗಪ್ಪ :- ದಯಮಾಡಿ, ಅನೇಕ ಪ್ರಶ್ನೆಗಳು ಇವೆ. ಪ್ರಶ್ನೆಗಳನ್ನು ಪೋಸ್ಟ್‌ಪೋನ್ ಮಾಡಿದರೆ ಮತ್ತೆ ಕೇಳಲು ಟೈಮ್ ಇಲ್ಲ.

ಅಧ್ಯಕ್ಷರು :- ಇನ್ನೂ ತುಂಬಾ ಸಮಯ ಇದೆ, ಪ್ರಶ್ನೆ ಬರುತ್ತದೆ. ಇದು ಕಂಟಿನ್ಯುಯಾಸ್ ಸೆಷನ್ ಆಫ್‌ಟು ಜುಲೈ ಎಂಡ್.

Sri S. Suresh Kumar :- Not getting answers has also become a continous process.

ಅಧ್ಯಕ್ಷರು :- ಅದಕ್ಕೆ ಉತ್ತರವನ್ನು ತಾವು ಹೇಳುತ್ತೀರಾ ?

Sri. R.V. Deshpande :- I will try.

ಅಧ್ಯಕ್ಷರು :- ಟ್ರೈ ಅಲ್ಲ. ಆಮೇಲೆ ಅರ್ಧ ಸಮಯ ವೇಸ್ಟ್ ಆಗುತ್ತದೆ ನಮಗೆ ಸರಿಯಾದ ಉತ್ತರ ಸಿಗಲಿಲ್ಲ ಎಂದರೆ

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಹಿನ್ನೆಲೆ ಏನು ಇದೆ, ಅದರ ಬಗ್ಗೆ ಓರಲ್ ಆಗಿ ಹೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಜಿಟಿಡಿಸಿನಲ್ಲಿ ಯಾವುದೋ ಪೋಸ್ಟ್‌ಗೆ ಇಂಟರ್‌ವ್ಯೂ ಕರೆಯುತ್ತಾರೆ, ಕಾನ್‌ಸ್ಟೇಬರ್ ಪೋಸ್ಟ್‌ಗೆ ಇಂಟರ್‌ವ್ಯೂ ಕರೆಯುತ್ತಾರೆ, ಬಂದವನನ್ನು ಸಬ್ ಇನ್ಸ್‌ಪೆಕ್ಟರ್ ಪೋಸ್ಟ್‌ಗೆ ಸೆಲೆಕ್ಟ್ ಮಾಡುತ್ತಾರೆ. ಹಾಗೆ ಇವತ್ತು ಸೆಲೆಕ್ಷನ್ ಪ್ರೊಸೆಸ್‌ನಲ್ಲಿ ಬಹಳ ದೊಡ್ಡ ಅನ್ಯಾಯ ಆಗಿದೆ. ಎರಡನೆಯದು ಆ ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಅರ್ಹತೆ ಇಲ್ಲದೇ ಇದ್ದರೂ ಕೂಡ ಇದ್ದವರನ್ನೇ ಅಂದರೆ ಯಾರು ಮ್ಯಾನೇಜರ್ ಆಗಿ ಬಂದರು, ಯಾರನ್ನು ಡಷ್ಟುಟಿ ಮ್ಯಾನೇಜರ್ ಆಗಿ ತೆಗೆದುಕೊಂಡರು ಅವರನ್ನೇ ಇವತ್ತು ಜನರಲ್ ಮ್ಯಾನೇಜರ್ ಆಗಿ ಕೂರಿಸಿದ್ದಾರೆ. ಈ ಸಂಗತಿಗಳ ಜೊತೆಗೆ ಹಣದ ವ್ಯವಹಾರದ ಇರಬಹುದು. ಪಕ್ಷಪಾತ ಇರಬಹುದು. ಇವತ್ತು ಜಿಟಿಡಿಸಿ ಅಂತಹ ಸಂಸ್ಥೆ ಇನ್ನೊಂದು ಮೈಸೂರು ಲ್ಯಾಂಪ್ಸ್ ಆಗುವುದಕ್ಕೆ ಹೊರಟಿದೆ. ಈ ದೃಷ್ಟಿಯಿಂದ ಸರ್ಕಾರದ ಸಮಜಾಯಿಷಿಯನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಜಿಟಿಡಿಸಿ ಇದು ಒಳ್ಳೆಯ ಸಂಸ್ಥೆ ಅದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ಕಾಣಿಸುತ್ತದೆ. ಏಕೆಂದರೆ ತಮ್ಮ ಕ್ಷೇತ್ರದಲ್ಲಿ ಹೆಡ್ ಆಫೀಸ್ ಬರುತ್ತದೆ. ಹಲವಾರು ಕಡೆ ಮೈಸೂರು, ಹುಬ್ಬಳ್ಳಿ, ಹರಿಹರ, ಬಳ್ಳಾರಿ, ಬೆಳಗಾಂ, ಮಂಗಳೂರು, ದಾಂಡೇಲಿ ಕಡೆ ಸೆಂಟರ್ಸ್ ಪ್ರಾರಂಭ ಮಾಡಿ ಇವತ್ತು ವಿದ್ಯಾರ್ಥಿಗಳಿಗೆ ಒಳ್ಳೆಯ ತರಬೇತಿ ಕೊಟ್ಟು ಒಳ್ಳೆಯ ಮಾನವ ಸಂಪನ್ಮೂಲಗಳನ್ನು ನಿರ್ಮಾಣ ಮಾಡುತ್ತಿವೆ. ಈಗ ನಮ್ಮ ಸ್ನೇಹಿತರಾದಂತಹ ಮಾನ್ಯ ಸುರೇಶ್ ಕುಮಾರ್ ಅವರು ಕೆಲವೊಂದು ಆಪಾದನೆಗಳನ್ನು ಮಾಡಿದ್ದಾರೆ. ನೇಮಕಾತಿಯಲ್ಲಿ, ಸೆಲೆಕ್ಷನ್‌ನಲ್ಲಿನ ವಿಚಾರ ಪ್ರಸ್ತಾಪ ಮಾಡಿದರು. ನಿನ್ನೆ ಈ ವಿಚಾರ ಮೇಲ್ಮಯಲ್ಲಿ ಪ್ರಸ್ತಾಪ ಆಗಿತ್ತು. ಅವರು ಇನ್ನೂ ನಿಮಗಿಂತ ಹೆಚ್ಚು ಆಪಾದನೆಗಳನ್ನು ಮಾಡಿದ್ದರು. ಹಾಗಾಗಿ ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳುತ್ತೇನೆ. ನಿನ್ನೆ ಸಣ್ಣ ಕೈಗಾರಿಕಾ ಸಚಿವರು ಮೇಲ್ಮಯಲ್ಲಿ ಇದರ ಬಗ್ಗೆ ತನಿಖೆ ಮಾಡುತ್ತೇನೆ. ನಮ್ಮ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಅವರು ಏನು ಇದ್ದಾರೆ, ಅವರ ಕಡೆಯಿಂದ ನಾನು ಹತ್ತು ದಿವಸದಲ್ಲಿ ವರದಿಯನ್ನು

ತರಿಸುತ್ತೇನೆಂದು ಹೇಳಿದ್ದಾರೆ. ತಮ್ಮ ಆಪಾದನೆಗಳು ಏನು ಇವೆ, ಅದನ್ನೂ ಸೇರಿಸಿ ತನಿಖೆ ಮಾಡಿ ನಾವು ಸದನಕ್ಕೆ ಉತ್ತರವನ್ನು ಕೊಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :- ತನಿಖೆಗೆ ಇದೊಂದನ್ನು ಸೇರಿಸಿಕೊಂಡು ಬಿಡಿ ಮ್ಯಾನೇಜರ್ ಪೋಸ್ಟ್‌ಗೆ ಅಡ್ವರ್‌ಟೈಸ್‌ಮೆಂಟ್ ಕರೆಯುತ್ತಾರೆ. ಆ ಅಡ್ವರ್‌ಟೈಸ್‌ಮೆಂಟ್‌ನಲ್ಲಿ ಆ ಕಂಪನಿಯ ಲೋಗೋ ಹಾಕುವುದಿಲ್ಲ. ಬರೇ ಕರೆಯುವುದು, ಮ್ಯಾನೇಜರ್ ಪೋಸ್ಟ್ ಎಂದು ಕರೆದು Maximum age limit is 33 years. ಆದರೆ ಸೆಲೆಕ್ಟ್ ಮಾಡಿದವರ ವಯಸ್ಸು 45 ವರ್ಷ.

ಶ್ರೀ ಆರ್.ವಿ. ದೇಶಪಾಂಡೆ :- ನಾನು ಹೆಚ್ಚು ಡಿಬೇಟ್ ಮಾಡದೇ ಇದನ್ನು ತಕ್ಷಣ ಕನ್ಸಿಡರ್ ಮಾಡುತ್ತೇನೆ. ಸರ್ಕಾರ ಯಾವ ರೀತಿಯಾಗಿ ಪಾರದರ್ಶಕವಾಗಿ ಕೆಲಸ ಮಾಡುತ್ತಿದೆ ? ತಕ್ಷಣ ಯಾವ ಪ್ರಕಾರ ತಾವು ಆಪಾದನೆಗಳನ್ನು ಹೇಳಿದಾಗ ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದನ್ನು ನೀವು ಮೆಚ್ಚಬೇಕು. ನಾನು ಮಚ್ಚುತ್ತೇನೆಂದು ತಕ್ಷಣ ಹೇಳಬೇಕಾಗಿತ್ತು. ಸರ್ಕಾರಕ್ಕೆ ಅಭಿನಂದನೆ ಹೇಳಬೇಕಾಗಿತ್ತು. ನೀವು ಹೇಳಲಿಲ್ಲ. ಪುನಃ ಮತ್ತೆ ನಿಮ್ಮದೇ ಕಥೆಯನ್ನು ಹೇಳುತ್ತೀರಿ.

ಶ್ರೀ ಎಸ್. ಸುರೇಶ್ ಕುಮಾರ್ :- ನೀವೂ ಸಹ ಮೆಚ್ಚಿಕೊಳ್ಳಬೇಕು. ಇಂತಹ ಒಂದು ಇಶ್ಯೂವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಅದಕ್ಕೋಸ್ಕರ ಸರ್ಕಾರ ಹೇಳಿದೆ ಅದನ್ನು ಸ್ವಾಗತಿಸುತ್ತೇನೆ. ಸ್ಪೆಸಿಫಿಕಲಿ ವ್ಯವಸ್ಥಾಪಕರ ಹುದ್ದೆಗೆ ಅರ್ಜಿ ಕರೆದು ಆ ವ್ಯಕ್ತಿಯನ್ನು ಡೆಪ್ಯುಟಿ ಜನರಲ್ ಮ್ಯಾನೇಜರ್ ಮಾಡಿ, ಇನ್ನೊಂದು ಅವರಿಗೋಸ್ಕರನೇ ಇಂಟರ್‌ವ್ಯೂ ಕರೆದು ಅವರನ್ನು ಜನರಲ್ ಮ್ಯಾನೇಜರ್ ಮಾಡಿರುವ ಬಗ್ಗೆ ಒಂದು ಎನ್‌ಕ್ವೈರಿ ನಡೆಯಬೇಕು. ಅದರ ಜೊತೆಗೆ ಆ ಒಂದು ಸಂಸ್ಥೆಗೆ ಬಂದಿರುವಂತಹ ಆಆರ್ಡರ್‌ಗಳನ್ನು ಹೊರಗಡೆ ಇರುವ ಸಂಸ್ಥೆಗೆ ಇವತ್ತು ಮಾರಾಟ ಮಾಡಿ, ಜಿಟಿಡಿಸಿಯ ಕಾರ್ಮಿಕರಿಗೆ ಕೆಲಸ ಇರದಿರುವ ಪರಿಸ್ಥಿತಿ ಬಂದಿದೆ. ಇದನ್ನೂ ಕೂಡ ತಮ್ಮ ಎನ್‌ಕ್ವೈರಿಯಲ್ಲಿ ಸೇರಿಸಿ. ದಯವಿಟ್ಟು ನಮಗೆ ವಿಚಾರಣಾ ವರದಿಯನ್ನು ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ :- ತಾವೇನು ಸೂಚನೆ ಮಾಡಿದ್ದೀರಿ, ಅದನ್ನು ಒಳಗೊಂಡಂತೆ ನಾವು ವಿಚಾರಣೆ ಮಾಡಿಸುತ್ತೇವೆ. ಸಾಧ್ಯವಾದರೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ತಾವೇನು ಹೇಳಿದಿರಲ್ಲಾ, ಅದನ್ನು ತಾವು ಬರೆದುಕೊಟ್ಟರೆ ನಾನು ಇವತ್ತೇ ಆಜ್ಞೆ ಮಾಡಿ ಕಳುಹಿಸುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್ ಅವರು ಕೇಳಿರುವಂತಹ ಪ್ರಶ್ನೆಗೆ ಪೂರಕವಾಗಿ ನಾನು ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ 25.07.2002 ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1513 ರಲ್ಲಿ ನಾನು ಗವರ್ನಮೆಂಟ್ ಸೋಪ್ ಫ್ಯಾಕ್ಟರಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಮಂತ್ರಿಗಳಾದ ರೋಷನ್ ಬೇಗ್ ಆ ಸಂಬಂಧವಾಗಿ ಉತ್ತರವನ್ನು ಕೂಡ ಕೊಟ್ಟಿದ್ದರು. ನನ್ನ ಪ್ರಶ್ನೆಗೆ ಉತ್ತರವಾಗಿ ಅವರು ಏನು ಅನಾಮಲೀಸ್ ಇದೆ, ಅದನ್ನು ಎಲ್ಲಾ ಸರಿಪಡಿಸುತ್ತೇವೆ, ಗವರ್ನಮೆಂಟ್ ಅಫಿಷಿಯಲ್ಸ್, ಮತ್ತು ಸಂಘ ಸಂಸ್ಥೆಯವರನ್ನು ಕರೆಸಿ ಅನಾಮಲೀಸ್ ಹೋಗಲಾಡಿಸುತ್ತೇವೆ ಎಂದು ಈ ಸದನದಲ್ಲಿ ಹೇಳಿದ್ದರು. ಇದುವರೆಗೂ ಕೂಡ ಆ ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸದನದಲ್ಲಿ ಏನು ಭರವಸೆ ಕೊಟ್ಟಿದ್ದರು, ಆ ಬಗ್ಗೆ ಇನ್ನೂ

ಮಾತುಕತೆ ಮೂಲಕ ಸರಿಪಡಿಸಿಲ್ಲ. ಈ ಸಂದರ್ಭದಲ್ಲಿಯೇ ಮಾನ್ಯ ಸುರೇಶ್ ಕುಮಾರ್ ಅವರು ಪ್ರಸ್ತಾಪ ಮಾಡಿದ ಹಾಗೆ ಈಗೇನು ಪೋಸ್ಟ್‌ಗೆ ಕರೆದಂತಹ, ಇಂಟರ್‌ವ್ಯೂಗೆ ಸಂಬಂಧಪಟ್ಟಂತಹ ಹುದ್ದೆಯನ್ನು ಅವರಿಗೆ ಕೊಟ್ಟಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಅದರ ಮೇಲ್ಪಟ್ಟ ಹುದ್ದೆಗಾಗಿ ಆಯ್ಕೆ ಮಾಡಿದ್ದಾರೆ. ಇದು ಕ್ರಮ ಸರಿಯಲ್ಲ. ಮತ್ತು ಮಾನ್ಯ ಸುರೇಶ್ ಕುಮಾರ್ ಅವರೇನು ಪ್ರಸ್ತಾಪ ಮಾಡಿದ್ದಾರೆ, ಆ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ಕೇಸ್ ಕೂಡ ಪೆಂಡಿಂಗ್ ಇದೆ. ಇವರು ಮಾಡಿರತಕ್ಕದ್ದು ಸರಿಯಿಲ್ಲ ಎಂದು ಹೇಳಿ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದಾರೆ. ಹಾಗಾಗಿ ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇದು ಕಾನೂನು ಬಾಹಿರ ಆಯ್ಕೆ ಆಗಿರುವುದರಿಂದ ಆದನ್ನು ರದ್ದುಪಡಿಸಿ, ಹಿಂದೆ ಏನು ರೋಷನ್ ಬೇಗ್ ಅವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾದರೆ ಈ ಅನಾಮಲೀಸನ್ನು ಸರಿಪಡಿಸುತ್ತೇವೆಂದು ಹೇಳಿದ್ದರು, ಒಟ್ಟಾರೆ ನೀವು ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಚಿಂತನೆ ಮಾಡಿ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ನಾನು ಹೇಳಬಯಸುತ್ತೇನೆ.

ಶ್ರೀ ಆರ್.ವಿ ದೇಶಪಾಂಡೆ :- ಈಗ ಇವರೇನು ಹೇಳಿದ್ದಾರಲ್ಲಾ, ಅದನ್ನೂ ಗಮನದಲ್ಲಿಟ್ಟುಕೊಂಡು ಅದರ ಬಗ್ಗೆಯೂ ತನಿಖೆ ಮಾಡುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು :- ಮುಂದಿನ ಪ್ರಶ್ನೆ ಮಾನ್ಯ ಹನುಮೇಗೌಡರದ್ದು, ಅವರಿಗೆ ಮೈಯಲ್ಲಿ ಹುಷಾರಿಲ್ಲದ ಕಾರಣ ಆ ಪ್ರಶ್ನೆ ಮುಂದಿನ ವಾರ ತೆಗೆದುಕೊಳ್ಳಿ ಎಂದಿದ್ದಾರೆ, ಸಮಯ ಸಿಕ್ಕರೆ ನೋಡೋಣ.

ಅಥಣಿಯ ಕೃಷ್ಣಾ ಸಹಕಾರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಚುನಾವಣೆ

138 (1321) ಶ್ರೀ ಭರಮಗೌಡ ಅ. ಕಾಗೆ : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಹಂಗಾಮಿನಲ್ಲಿ ಅಥಣಿಯ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಎಷ್ಟು ಟನ್ ಕಬ್ಬು ಅರೆದು ಎಷ್ಟು ಸಕ್ಕರೆ ಉತ್ಪಾದಿಸಿದೆ, ಹಾಗೂ ಇಲ್ಲಿಯವರೆಗೆ ಎಷ್ಟು ಟನ್ ಸಕ್ಕರೆ ಮಾರಾಟ ಮಾಡಲಾಗಿದೆ ?

ಆ) ಸದರಿ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದರೆ ಸದರಿ ಕಾರ್ಖಾನೆಯ ಆಡಳಿತ ಮಂಡಳಿ ಚುನಾವಣೆಯನ್ನು ಯಾವಾಗ ನಡೆಸಲಾಗುವುದು ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) 2002-03ನೇ ಹಂಗಾಮಿನಲ್ಲಿ ಕಾರ್ಖಾನೆಯು ದಿನಾಂಕ 04.03.2003 ವರೆಗೆ 2,35,660 ಮೆ.ಟನ್ ಕಬ್ಬು ನುರಿಸಿ 26495.80 ಮೆ.ಟನ್ ಸಕ್ಕರೆ ಉತ್ಪಾದಿಸಿದ್ದು 1983.50 ಮೆ.ಟನ್ ಸಕ್ಕರೆ ಮಾರಾಟ ಮಾಡಿರುತ್ತದೆ.

ಆ) ಬಂದಿದೆ.

ಇ) ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 30(ಬಿ) ರಡಿಯಲ್ಲಿ ಅಧಿಕಾರ ಚಲಾಯಿಸಿ ಆದೇಶ ಸಂಖ್ಯೆ: ನಮಾತೂ:303:ಸಸಕಾ:99 ದಿನಾಂಕ: 11.4.2000 ರಲ್ಲಿ ದಿ.ಕೃಷ್ಣಾ